ದಿಃ02.04.2024 OS.No.87/2021 PW-1

ದಿಃ02.04.2024 ರಂದು ಸಾಕ್ಷಿಯನ್ನು ಪುನಃ ಕರೆಸಲಾಯಿತು ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಶ್ರೀ.ಹೆಚ್.ಡಿ.ಎಸ್. ವಕೀಲರಿಂದ

ನಾನು ದಾವಾ ಸ್ವತ್ತುಗಳ ಬಗ್ಗೆ ತಿಳಿದುಕೊಂಡಿರುತ್ತೇನೆ. ನನ್ನ ಮಾವನಿಗೆ ಎರಡು ಮನೆಗಳು ಇತ್ತು ಆದರೆ ವ್ಯವಸಾಯದ ಭೂಮಿ ಎಷ್ಟಿತ್ತು ಎಂದು ಗೊತ್ತಿರುವುದಿಲ್ಲ. ಒಟ್ಟು ಕುಟುಂಬದ ಎಲ್ಲಾ ಸ್ವತ್ತುಗಳು ನನ್ನ ಮಾವನ ಕಾಲದಲ್ಲಿ ಏನಾಗಿದೆ ಎಂದು ನಾನು ತಿಳಿದು ಕೊಂಡಿರುವುದಿಲ್ಲ. ದಾವಾ 1ನೇ ಸ್ವತ್ತಿಗೆ ಚಕ್ಕುಬಂದಿ ನನಗೆ ಗೊತ್ತಿರುವುದಿಲ್ಲ. ಸಾಕ್ಷಿಯು ಮುಂದುವರೆದು ತನಗೆ ಸದರಿ ಸ್ವತ್ತುಗಳ ಚಕ್ಕುಬಂಧಿ ಗೊತ್ತೆಂದು ನುಡಿಯುತ್ತಾರೆ. ಸದರಿ ಸ್ವತ್ತುಗಳಿಗೆ ಚಕ್ಕೆಬಂದಿ ಪೂರ್ವಕ್ಕೆ ರಾಮಣ್ಣ, ಪಶ್ಚಿಮಕ್ಕೆ ಜಗ್ಗಯ್ಯ ಉತ್ತರಕ್ಕೆ ಡೊಳ್ಳಯ್ಯ ಮತ್ತು ದಕ್ಷಿಣಕ್ಕೆ ರಾಮಣ್ಣನವರ ಸ್ವತ್ತು ಇರುತ್ತದೆ. ಸದರಿ ಚಕ್ಕುಬಂದಿ 4 ಸರ್ವೆ ನಂಬರ್ ಸ್ವತ್ತುಗಳಿಗೆ ಸಂಬಂಧಿಸಿರುತ್ತದೆ. ದಾವಾ ಸ್ವತ್ತುಗಳಲ್ಲಿಸಿ ನಾನು ಸ್ವಾಧೀನದಲ್ಲಿ ಇಲ್ಲದೇ ಇರುವ ಕಾರಣ ನನಗೆ ಚಕ್ಕುಬಂದಿ ಗೊತ್ತಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳುಚಕ್ಕುಬಂದಿಯನ್ನು ಹೇಳುತ್ತಿದ್ದೇನೇ ಎಂದರೆ ಸರಿಯಲ್ಲ. ನಾನು ಮತ್ತು ಇತರೆ ವಾದಿಗಳು ದಾವಾ ಸ್ವತ್ತುಗಳಲ್ಲಿ ಸ್ವಾಧೀನದಲ್ಲಿ ಇಲ್ಲ ಎಂದರೆ ಜಂಟಿ ಸ್ವಾಧೀನದಲ್ಲಿ ಇರುತ್ತೇವೆ. ನಮ್ಮ ಜೊತೆ ಪ್ರತಿವಾದಿಯೂ ಸಹ ಜಂಟಿ ಸ್ವಾಧೀನದಲ್ಲಿ ಇರುತ್ತಾರೆ.

ನಾವು ಮತ್ತು ಪ್ರತಿವಾದಿಯು ಈಗಲೂ ಒಟ್ಟಿಗೆ ವಾಸವಿದ್ದು ಬೇರೆ ಬೇರೆ ಮನೆಯಲ್ಲಿ ಇರುತ್ತೇವೆ. ನನ್ನ ಪತಿಯ ಕಾಲದಿಂದಲೂ ಆ ರೀತಿ ಪ್ರತ್ಯೇಕವಾದ ಮನೆಯಲ್ಲಿ ವಾಸವಿರುತ್ತೇವೆ. ನಮ್ಮ ವ್ಯವಹಾರ ಮತ್ತು ಪ್ರವಾದಿಯ ವ್ಯವಹಾರ ಪ್ರತ್ಯೇಕವಾಗಿರುತ್ತದೆ ಎಂದರೆ ಸರಿ. ದಾವಾ

ಸ್ವತ್ತುಗಳಲ್ಲಿ ಭಾಗ ಬರಬೇಕೆಂದು ನನ್ನ ಪತಿಯು ಪಂಚಾಯಿತಿ ಮಾಡಿಸಿರಲಿಲ್ಲ. ಭಾಗ ತೆಗೆದುಕೊಳ್ಳುವಂತೆ ನನ್ನ ಪತಿಯು ನನಗೆ ಹೇಳಿರಲಿಲ್ಲ. ದಾವಾ ಸ್ವತ್ತುಗಳಲ್ಲಿ ನಮಗೆ ಭಾಗದ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಪತಿಯು ದಾವಾ ಸ್ವತ್ತುಗಳನ್ನು ಪ್ರತಿವಾದಿಗೆ ಬಿಟ್ಟುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಆ ಸಂಬಂಧವಾಗಿ ನನ್ನ ಪತಿಯು ನಗದು ರೂಪದಲ್ಲಿ ಪ್ರತಿವಾದಿಯಿಂದ 50 ಸಾವಿರಗಳನ್ನು ಪಡೆದಿದ್ದರು ಎಂದರೆ ನನಗೆ ಗೊತ್ತಿರುವುದಿಲ್ಲ. ಭಾಗ ತೆಗೆದುಕೊಳ್ಳುವಂತೆ ನನ್ನ ಪತಿಯನ್ನು ನಾನು ಕೇಳಿದ್ದು ಅವರು ತೆಗೆದುಕೊಳ್ಳುತ್ತೇನೆ ಸುಮ್ಮನಿರು ಎಂದು ನನಗೆ ಹೇಳಿರುತ್ತಾರೆ. ನನ್ನ ಪತಿಯು ಪ್ರತಿವಾದಿಯಿಂದ 50 ಸಾವಿರಗಳನ್ನು ಪಡೆದಿರುವುದು ನನಗೆ ಗೊತ್ತಿದ್ದರೂ ಸಹ ಸ್ವತ್ತುಗಳ ಬೆಲೆ ಜಾಸ್ತಿಯಾಗಿರುವ ಕಾರಣ ನಾನು ಈ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಯ ಹೆಸರಿನಲ್ಲಿ ಇರುವ ಖಾತೆಯನ್ನು ಪ್ರಶ್ನೇ ಮಾಡಿಲ್ಲ ಎಂದರೆ ಅವರು ಮೋಸ ಮಾಡುವುದಿಲ್ಲ ಭಾಗ ಕೊಡುತ್ತಾರೆ ಎಂದು ಕಾದಿದ್ದೆವು. ಆದ್ದರಿಂದ ಪ್ರಶ್ನೇ ಮಾಡಿರುವುದಿಲ್ಲ. ದಾವಾ ಸ್ವತ್ತು ಭೂಸ್ವಾಧೀನ ಆಗುವ ಸಂಭವವಿರುವುದರಿಂದ ನಾನು ಈ ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ನಿಜ ಸಂಗತಿಯನ್ನು ನನ್ನ ಮಕ್ಕಳಿಗೆ ಹೇಳದೇ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ನಾವು ಮತ್ತು ಪ್ರತಿವಾದಿಯು ಜಂಟಿ ಸ್ವಾಧೀನದಲ್ಲಿ ಇರುವ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ನನ್ನ ಮಾವನು ದಾವಾ ಸ್ವತ್ತುಗಳ ಕೆಲವು ಭಾಗವನ್ನು ಅಡಮಾನ ಮಾಡಿದ್ದರು ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳಲ್ಲಿ ಈ ಹಿಂದೆ ಬೇರೆಯವರು ವ್ಯವಸಾಯ ಮಾಡುತ್ತಿದ್ದರು ಎಂದರೆ ಸರಿ. ಆ ರೀತಿ ವ್ಯವಸಾಯ ಮಾಡುತ್ತಿದ್ದ ವ್ಯಕ್ತಿಗಳ ಹೆಸರು ಗೊತ್ತಿರುವುದಿಲ್ಲ. ಅಡಮಾನ ಮಾಡಿರುವುದನ್ನು ಮರೆಮಾಚಿ ನಾನು

ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಚಕ್ಕುಬಂದಿಯ ಬಗ್ಗೆ ಗೊತ್ತಿಲ್ಲದೇ ಇದ್ದರೂ ಸುಳ್ಳು ದಾವೆ ಸಲ್ಲಿಸಿರುತ್ತೆನೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳಲ್ಲಿ ನಾವು ಸ್ವಾಧೀನದಲ್ಲಿ ಇಲ್ಲ ಎಂದರೆ ಸರಿಯಲ್ಲ. ನನ್ನ ಪತಿಯ ಭಾಗಕ್ಕೆ ಬರಬೇಕಾದ ಭಾಗವು ಈಗಾಗಲೇ ನಗದು ರೂಪದಲ್ಲಿ ಬಂದಿರುತ್ತದೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳಲ್ಲಿ ನನಗೆ ನಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ.

<u>(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಬೆರಳಚ್ಚು ಮಾಡಲಾಯಿತು)</u>

ಓ.ಹೇ.ಕೇ.ಸ.ಓ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ ಚನ್ನಪಟ್ಟಣ.